# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ : 844
2. ಸದಸ್ಯರ ಹೆಸರು : ಶ್ರೀ ಎಂ.ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು)
3. ಉತ್ತರಿಸಬೇಕಾದ ದಿನಾಂಕ : 23.07.2024
4. ಉತ್ತರಿಸುವ ಸಚಿವರು : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು.

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಬೆಂಗಳೂರು ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ಸಿಗ್ನೇಚರ್ ಬ್ಯುಸಿನೆಸ್ ಪಾರ್ಕ್ ನಿರ್ಮಿಸಲು ಸರ್ಕಾರದ ವತಿಯಿಂದ ಎಷ್ಟು ಎಕರೆ ಜಾಗವನ್ನು ಗುರುತಿಸಲಾಗಿದೆ; | ಬೆಂಗಳೂರು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ಬೆಂಗಳೂರು ಸಿಗ್ನೇಚರ್ ಬ್ಯುಸಿನೆಸ್ ಪಾರ್ಕ್ ನಿರ್ಮಿಸಲು ಒಟ್ಟು 407 ಎಕರೆ 02 ಗುಂಟೆ ಜಾಗವನ್ನು ಗುರುತಿಸಲಾಗಿದೆ. |
| (ಆ) | ಈ ಬ್ಯಸಿನೆಸ್ ಪಾರ್ಕ್‌ನ್ನು ನಿರ್ಮಿಸಲು ಭೂಮಾಲೀಕರಿಂದ ಭೂಮಿಯನ್ನು ಸ್ವಾಧೀನ ಪಡಿಸಿಕೊಂಡು ಭೂಪರಿಹಾರ ವಿತರಿಸಲಾಗಿದೆಯೇ; | ಬೆಂಗಳೂರು ಸಿಗ್ನೇಚರ್ ಬ್ಯುಸಿನೆಸ್ ಪಾರ್ಕ್(ಬಿಎಸ್‌ಬಿಪಿ) ಯೋಜನೆಗೆ 407 ಎಕರೆ 02 ಗುಂಟೆ ಜಮೀನನ್ನು ಕೆ.ಐ.ಎ.ಡಿ.ಬಿ ಯು ಸ್ವಾಧೀನ ಪಡಿಸಿಕೊಂಡು, ಕೆ.ಎಸ್.ಐ.ಐ.ಡಿ.ಸಿ.ಗೆ ಹಸ್ತಾಂತರಿಸಿರುತ್ತದೆ. ಕೆ.ಐ.ಎ.ಡಿ.ಬಿ.ಯ ಮುಖಾಂತರ ಭೂ-ಮಾಲೀಕರಿಗೆ ಭೂ ಪರಿಹಾರ ವಿತರಿಸಿರುತ್ತಾರೆ.<br><br>ಬಿಎಸ್‌ಬಿಪಿ ಯೋಜನೆಯ ವ್ಯಾಪ್ತಿಯಲ್ಲಿ ಬರುವ ಭುವನಹಳ್ಳಿ ಗ್ರಾಮದ 36 ಎಕರೆ 21 ಗುಂಟೆ ಮತ್ತು ಉದಯಗಿರಿ ಗ್ರಾಮದ 32 ಎಕರೆ 12 ಗುಂಟೆ ಜಮೀನುಗಳ ಭೂಮಾಲೀಕರು ಹೆಚ್ಚುವರಿ ಪರಿಹಾರಕ್ಕಾಗಿ ನ್ಯಾಯಾಲಯದಲ್ಲಿ ಮೊಕದ್ದಮೆ ದಾಖಲಿಸಿದ್ದು ನ್ಯಾಯಾಲಯದ ಆದೇಶದಂತೆ ಶೇ. 50 ರಷ್ಟು ಪರಿಹಾರವನ್ನು ಕೆ.ಐ.ಎ.ಡಿ.ಬಿ ಯು ಪಾವತಿಸಿರುತ್ತದೆ. ಉಳಿದ ಪರಿಹಾರವನ್ನು ನ್ಯಾಯಾಲಯಕ್ಕೆ ಠೇವಣಿ ಮಾಡುವ ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ. |
| (ಇ) | ಸದರಿ ಪಾರ್ಕ್‌ನ್ನು ನಿರ್ಮಿಸುವ ಕಾರ್ಯವನ್ನು ಯಾವ ಗುತ್ತಿಗೆದಾರರಿಗೆ ಮತ್ತು ಎಷ್ಟು ಟೆಂಡರ್ ಮೊತ್ತಕ್ಕೆ ನೀಡಲಾಗಿದೆ; (ಸಂಪೂರ್ಣ ವಿವರ ನೀಡುವುದು) | ಬೆಂಗಳೂರು ಸಿಗ್ನೇಚರ್ ಬ್ಯುಸಿನೆಸ್ ಪಾರ್ಕ್ ಯೋಜನೆಗೆ ನೇಮಿಸಿರುವ ಗುತ್ತಿಗೆದಾರರು ಮತ್ತು ಟೆಂಡರ್ ಮೊತ್ತದ ವಿವರ ಈ ಕೆಳಗಿನಂತಿದೆ. |

| ಕ್ರ. ಸಂ. | ಪ್ಯಾಕೇಜ್/ ಕಾಮಗಾರಿಯ ವಿವರ | ಗುತ್ತಿಗೆದಾರರು | ಟೆಂಡರ್ ಮೊತ್ತ ರೂ. ಕೋಟಿಗಳಲ್ಲಿ (GST ಹೊರತು ಪಡಿಸಿ) |
|---|---|---|---|
| 1. | ಪ್ಯಾಕೇಜ್-1 ಬಿಎಸ್‌ಬಿಪಿ | ಮೆ: RMN Infrastructure Pvt. Ltd. | 167.81 |
| 2. | ಪ್ಯಾಕೇಜ್-2 ಬಿಎಸ್‌ಬಿಪಿ ಎರಡು ಸಂಖ್ಯೆಯ 66/11 Kv ಉಪ ಕೇಂದ್ರ | ಮೆ: Mahaveer Electro-Mech Pvt. Ltd | 106.85 |
| 3. | ಬಿಎಸ್‌ಬಿಪಿ ಸಂಪರ್ಕ ಮೇಲುಸೇತುವೆ | ಮೆ:PJB Engineering Pvt. Ltd | 126.09 |

| | | |
|---|---|---|
| (ಈ) | ಸದರಿ ಪಾರ್ಕ್ ನಿರ್ಮಾಣದ ಅಂದಾಜು ಮೊತ್ತದ ಬಗ್ಗೆ ಮಾಹಿತಿ ಮತ್ತು ಯಾವ ಯಾವ ಸೌಕರ್ಯಗಳನ್ನು ಕಲ್ಪಿಸಲಾಗುವುದು? (ಮಾಹಿತಿಯನ್ನು ಒದಗಿಸುವುದು) | ಬೆಂಗಳೂರು ಸಿಗ್ನೇಚರ್ ಬ್ಯುಸಿನೆಸ್ ಪಾರ್ಕ್‌ನ್ನು ರೂ.398.42 ಕೋಟಿಗಳ ಅಂದಾಜು ಮೊತ್ತದಲ್ಲಿ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ.<br><br>ಸದರಿ ಯೋಜನೆಯ ಪ್ಯಾಕೇಜ್-1ರಲ್ಲಿ ರಸ್ತೆಗಳು, ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ, ವಿದ್ಯುತ್ ಮೂಲಸೌಕರ್ಯ, ಮಳೆ ನೀರಿನ ಚರಂಡಿ ವ್ಯವಸ್ಥೆ, Utility Ductಗಳು, ಇತ್ಯಾದಿ ಸೌಕರ್ಯಗಳು ಒಳಗೊಂಡಿವೆ. ಪ್ಯಾಕೇಜ್-2ರಲ್ಲಿ ಬಿ.ಎಸ್.ಬಿ.ಪಿ ಯೋಜನೆಗೆ ನಿರಂತರ ವಿದ್ಯುಚ್ಛಕ್ತಿಯನ್ನು (24x7) ಒದಗಿಸಲು ಎರಡು ಸಂಖ್ಯೆಯ 66/11 Kv ಉಪ ಕೇಂದ್ರಗಳ ಸೌಕರ್ಯಗಳು ಒಳಗೊಂಡಿವೆ ಮತ್ತು ಬಿ.ಎಸ್.ಬಿ.ಪಿ ಯೋಜನಾ ಪ್ರದೇಶಕ್ಕೆ ವಾಹನ ಸಂಚಾರವನ್ನು ಸುವ್ಯವಸ್ಥಿತಗೊಳಿಸುವ ಸಲುವಾಗಿ 2+2 ಪಥದ (1180 ಮೀ ಉದ್ದದ) ಮೇಲುಸೇತುವೆಯ ಸೌಕರ್ಯಗಳು ಸಹ ಒಳಗೊಂಡಿವೆ. |

ಸಂಖ್ಯೆ: ಮೂಅಇ 114 ರಾಅವಿ 2024

**(ಎಂ.ಬಿ. ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ, ಸಚಿವರು